ಈ ಬಾರಿಯ ನೊಬೆಲ್ ಪಾರಿತೋಷಕದ ರೇಸಿನಲ್ಲಿ ಕೊನೆಯಲ್ಲಿದ್ದ ಕಜವೊ ಇಜಿಗಾರೊ ಮುನ್ನೆಲೆಗೆ ಬಂದದ್ದೂ ಒಂದು ಅಚ್ಚರಿಯಾದರೂ ಸೂಕ್ತ ಆಯ್ಕೆಯೇ ಸರಿ ಎನ್ನುತ್ತಾರೆ ವಿಮರ್ಶಕರು. ವಸಾಹತುಪೂರ್ವ ಸಾಹಿತ್ಯದ 'ಅಸುರ ಶಕ್ತಿಯ ಅರಸ' ಕೀನ್ಯಾದ ಗೂಗಿ ವಾ ಥಿಯಾಂಗೊ, ಮತ್ತು ಆಧುನಿಕೋತ್ತರ ಜನಪ್ರಿಯ ಓದುಗರ ಡಾರ್ಲಿಂಗ್ ಜಪಾನಿನ ಹರೂಕಿ ಮುರಕಾಮಿ ಇವರಿಬ್ಬರ ಮೇಲೆಯೇ ಬುಕ್ಕಿಗಳು ಹಣ ಹೂಡಿ ಲಾಭ ಮಾಡಿಕೊಳ್ಳುವ ಉಮೇದಿನಲ್ಲಿದ್ದರು. ಅನೇಕ ಐಷಾರಾಮಿ ಜೂಜುಗಾರರು ಮುರಕಾಮಿಯ ಮೇಲೆಯೇ ಅಧಿಕವಾಗಿ ಹಣ ಹೂಡಿದ್ದರು. ಆದರೆ ಎಲ್ಲರ ನಿರೀಕ್ಷೆ ತಲೆಕೆಳಗು ಮಾಡಿ ಕಜವೊ ಇಜಿಗಾರೊ ನೊಬೆಲ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡ! ನೊಬೆಲ್ ಜೂಜಿನ ಅನಧಿಕೃತ ಬುಕ್ಕಿಗಳು ತಲ್ಲಣಗೊಂಡು ನಿಂತರು! ಕಜವೊ ಇಜಿಗಾರೊ ಎಂಬ ಲೇಖಕನಿಗೆ ಈ ಸುದ್ದಿ ಮುಟ್ಟಿದಾಗ ಆತ ತನ್ನ ಮನೆಯ ಅಡುಗೆಕೋಣೆಯಲ್ಲಿದ್ದ! ನೊಬೆಲ್ ಎಂಬ ಚಿನ್ನದಮೊಟ್ಟೆಯನ್ನು ತನ್ನದಾಗಿಸಿಕೊಂಡು ಮುಗುಳ್ನಕ್ಕ! ನೊಬೆಲ್ ಪಾರಿತೋಷಕದ ಜೊತೆಗೆ ಅವನಿಗೆ ಸಿಗಲಿರುವುದು ಒಂಬತ್ತು ಮಿಲಿಯನ್ ಸ್ವೀಡಿಶ್ ಕೊನಾರಾರ್‌ಗಳು! ಅಂದರೆ ಭಾರತೀಯ ರೂಪಾಯಿಯಲ್ಲಿ ಎಂಟು ಕೋಟಿ! ಇಷ್ಟು ದೊಡ್ಡ ಮೊತ್ತ ಒಬ್ಬ ಬರಹಗಾರನಿಗೆ ಸಿಗಬೇಕಾದರೆ ಆತನ/ ಆಕೆಯ ಸಾಹಿತ್ಯದ 'ಶ್ರೇಷ್ಠತೆ' ಯಾವ ಮಟ್ಟಾದ್ದಾಗಿರಬೇಕು! ಆ ಶ್ರೇಷ್ಠತೆಯನ್ನು ಅಳೆಯುವ ಮಾನದಂಡಗಳ್ಯಾವು? ಈ ಹಣ ಇಲ್ಲವೇ ಪ್ರಶಸ್ತಿಯ ಮೂಲಕ ಬರಹಗಾರರ ಸತ್ವವನ್ನು ಅಳೆಯಬಹುದೆ? ಇಂಗ್ಲಿಷಿನಲ್ಲಿ ಬರೆಯುವ ಅಥವ ಅನುವಾದಗೊಳ್ಳುವ ಬರಹಗಾರರು ಮಾತ್ರ ನೊಬೆಲ್ ಪ್ರಶಸ್ತಿಗೆ ಅರ್ಹರೆ? ಇಂತಹ ಪ್ರಶ್ನೆಗಳಿಗೆ ನಮ್ಮಲ್ಲಿ ಹತ್ತಾರು ವಿಭಿನ್ನ ಉತ್ತರಗಳು, ಮರು ಪ್ರಶ್ನೆಗಳು ಇರಬಹುದಾದರೂ ಸ್ವೀಡಿಶ್ ಅಕಾಡೆಮಿ ನೀಡುವ ನೊಬೆಲ್ ಪ್ರಶಸ್ತಿ ಜಗತ್ತಿನ ಬಹು ಪ್ರತಿಷ್ಠಿತ ಪ್ರಶಸ್ತಿಯಾಗಿ ಬದಲಾಗಿ ದಶಕಗಳೇ ಕಳೆದಿವೆ. ಇಂತಹ ಪ್ರತಿಷ್ಠಿತ ಪ್ರಶಸ್ತಿ ಈ ಬಾರಿ ಇಂಗ್ಲೆಂಡ್‌ನಲ್ಲಿರುವ ಒಬ್ಬ ವಲಸೆಹೋದ ಸಾಹಿತಿಗೆ ಸಿಕ್ಕಿರುವುದು ಖುಷಿಯ ವಿಚಾರವೇ ಸರಿ!

ಕಜವೊ ಇಜಿಗಾರೊನನ್ನು ಈ ಪ್ರಶಸ್ತಿಗೆ ಪರಿಗಣಿಸಿದ ಆಯ್ಕೆ ಮಂಡಲಿ ತನ್ನ ಸುದ್ದಿಗೋಷ್ಠಿಯಲ್ಲಿ ಈತನ ಬರಹವನ್ನು ಸಾರ್ವಕಾಲಿಕ ಬರಹವೆಂದು ಹೇಳುತ್ತಾ ಇಂಗ್ಲಿಷ್ ಕತೆಗಾರ್ತಿ ಜೇನ್ ಆಸ್ಟಿನ್ ಮತ್ತು ಜರ್ಮನಿ ಕತೆಗಾರ ಫ್ರಾಂಜ್ ಕಾಫ್ಕಾರ ಬರಹಗಳಿಗೆ ಅವನ ಬರಹಗಳನ್ನು ಹೋಲಿಸಿತು. ಇಲ್ಲಿ ಮಜವಾದ ವಿಷಯವೇನೆಂದರೆ 'ಮೆಟಾಫಾರ್ಸಿಸ್'(ರೂಪಾಂತರ) ಖ್ಯಾತಿಯ ಅತಿವಾಸ್ತವ ಸಾಹಿತ್ಯದ 'ಬಾದ್ ಷಾ' ಫ್ರಾಂಜ್ ಕಾಫ್ಕಾನಿಗೆ ಇದುವರೆಗೂ ನೊಬೆಲ್ ಸಿಕ್ಕಿಲ್ಲ!

ವಾಸ್ತವ ಮತ್ತು ಅತಿವಾಸ್ತವತೆಗಳ ಮಿಶ್ರಣ ಇಜಿಗಾರನ ಬರವಣಿಗೆ ಎನ್ನುವುದು ಕೆಲವು ವಿಮರ್ಶಕರ ಅಭಿಪ್ರಾಯ. ಸಣ್ಣಕತೆಗಳ ಮೂಲಕ ತನ್ನ ಬರವಣಿಗೆಯನ್ನು ಆರಂಭಿಸಿ 'ಕಾದಂಬರಿ' ಸಾಹಿತ್ಯ ಪ್ರಕಾರವೇ ಸೃಜನಶೀಲತೆಯ ಉನ್ನತ ಅಭಿವ್ಯಕ್ತಿ ಎನ್ನುವ ನಿರ್ಧಾರಕ್ಕೆ ಬಂದು ತಲುಪಿದ ಈತನ ಸಾಹಿತ್ಯ ಪಯಣ ದೀರ್ಘವಾದುದು. ಕತೆ ಕಾದಂಬರಿಗಳಂತೆಯೇ ಟೀವಿ, ಸಿನಿಮಾಗಳಿಗೂ ಚಿತ್ರಕತೆ ಬರೆದ ಇಜಿಗಾರೊ ವಿಜ್ಞಾನ, ಹಿಂಸ್ರಕ ಕಥನ(ಕ್ರೈಂ ಫಿಕ್ಷನ್)ಗಳನ್ನೊಳಗೊಂಡಂತೆ ವಿಭಿನ್ನ ಗದ್ಯ ಬರೆದಂತೆಯೇ ಜನಪ್ರಿಯ ಸಂಗೀತಕ್ಕೆ ಹಾಡುಗಳನ್ನೂ ರಚಿಸಿದ್ದಾನೆ. ಇವನ ಬರಹಗಳಲ್ಲಿ ಮುಖ್ಯವಾದ ಅಂಶ 'ಗತಕಾಲದ ನೆನಪು'.

ಗತವನ್ನು ವರ್ತಮಾನದೊಂದಿಗೆ ಜೋಡಿಸುತ್ತಾ ಕಥೆ ಕಟ್ಟುವ ಇಜಿಗಾರೊ ತನ್ನ ಬರಹದ